ಕಾಣಿಸಿಕೊಂಡಿದ್ದರು. ಅಷ್ಟು ಹೊತ್ತಿಗೆ ಅವರ ತಂದೆ ಜವುಳಿ ಸಾಹುಕಾರರೂ ತೀರಿಹೋಗಿ ಅವರ ಅಂಗಡಿ ಮುಚ್ಚಿಹೋಗಿತ್ತು. ಆಲಿಯವರು ದೂರದಿಂದ ನನಗೆ ಅತ್ತೆಯಾಗಬೇಕಾಗಿದ್ದ ಅಮ್ಮಾಯಿಯನ್ನು ಮದುವೆಯಾಗಿ ಅವರನ್ನೂ ಕಟ್ಟಿಕೊಂಡು ಬಿಹಾರಕ್ಕೆ ತೆರಳಿದ್ದರು. ಅಲ್ಲಿ ಧನಾಬಾದ್‌ನಲ್ಲಿ ದೊಡ್ಡದೊಂದು ಕಲ್ಲಿದ್ದಲು ಗಣಿಯಲ್ಲಿ ಲೆಕ್ಕ ಬರೆಯುವವರಾಗಿ ಕೆಲಸ ಮಾಡುತ್ತಿರುವವರೆಂದು ಅಮ್ಮಾಯಿ ಊರಿಗೆ ಫೋನು ಮಾಡಿದಾಗ ಯಾರಲ್ಲೋ ಹೇಳಿದ್ದರು.

ಜುಬೇದಾ ಹುಟ್ಟಿದ್ದೂ ಧನಾಬಾದಿನಲ್ಲೇ. ಹಲವು ವರ್ಷಗಳ ನಂತರ ನಾನು ಮಡಿಕೇರಿಗೆ ಬಂದಾಗ ಅವಳೂ ಬೆಳೆದು ದೊಡ್ಡದಾದ ಹುಡುಗಿಯಾಗಿದ್ದಳು. ಈಗ ನೋಡಿದರೆ ಅವಳು ಮರಳಿ ಜಾರ್ಖಂಡಿಗೆ ಪರಾರಿಯಾಗಿದ್ದಳು.

ಇತಿಹಾಸದ ಚಕ್ರ ತುಂಬಾ ದೊಡ್ಡದೇನಲ್ಲ. ಅದು ಸಣ್ಣದೊಂದು ಗುಳಿಯೊಳಗೆ ತಿರುತಿರುಗಿ ಮಗುಚಿಬೀಳುವ ಬುಗುರಿಯ ಹಾಗೆ ಎಂದು ಅನಿಸಿ ನಗುಬಂತು. ಕಾಮ್ರೇಡ್ ಆಲಿ ರೈಟರ ಬದುಕಂತೂ ಒಂದು ಬುಗುರಿಯೇ ಸರಿ ಎಂದೆನಿಸಿ ಪಿಚ್ಚೆನಿಸಿತು. ಮಾವೋ ಚೇರ್ಮನ್ನೂ, ಸ್ಟಾಲಿನ್ನೂ, ಲೆನಿನ್ನೂ, ಚೆಗೆವಾರನೂ, ಚಾರೂ ಮಜುಂದಾರನೂ ದೊಡ್ಡ ದೊಡ್ಡ ನಕ್ಷತ್ರಗಳಾಗಿ ಉರಿದುರಿದು ತೀರಿ ಹೋದರೆ ನಮ್ಮ ಆಲಿ ರೈಟರು ನವೆದೂ ನವೆದೂ ತಿಂಗಳ ಸಂಬಳವೂ ಇಲ್ಲದೆ ಗುಳಿಯೊಂದರೊಳಗೆ ಸುಸ್ತಾಗಿ ತಿರುಗುತ್ತಿರುವರು.

ಕೆಲವು ತಿಂಗಳುಗಳ ಹಿಂದೆ ಒಂದು ಬೇಸಗೆಯ ಕಡು ಇರುಳಿನಲ್ಲಿ ಆಲಿ ರೈಟರು ಸನ್ ರೈಸ್ ಕಾಪಿತೋಟದೊಳಗೆ ಬೇಟೆಯಾಡಲು ಕರೆದೊಯ್ದಿದ್ದರು. ತೀಪಟ್ಟಿ ಮಲೆಯ ತೊಡೆಗಳ ನಡುವೆ ಹರಡಿಕೊಂಡಿರುವ ನೂರಾರು ಎಕರೆ ಕಾಫಿ ತೋಟ. ಯಾವುದು ಕಾಡು, ಯಾವುದು ಕಾಫಿ ಎಂದು ಗೊತ್ತಾಗದ ಹಾಗೆ ತಲೆ ಕ್ರಾಪು ಮಾಡಿಸಿಕೊಂಡ ಕಾಡುಮರಗಳ ನಡುವೆ ವ್ಯಗ್ರವಾಗಿ ಬೆಳೆದ ಬೃಹತ್ ರೋಬಸ್ಟಾ ಕಾಫಿಯ ಗಿಡಗಳು. ಕಡು ಕತ್ತಲೆಯ ಒಳಗೆ ಕಾಫಿ ರೆಂಬೆಗಳ ಮೇಲೆ ಜೊಂಪುಜೊಂಪಾಗಿ ಮುಗಿಬಿದ್ದಿರುವ ಕಳಿತ ಕಾಫಿಯ ಹಣ್ಣುಗಳು. ಅವುಗಳಿಗೆ ಮುಗಿಬಿದ್ದು ಹಾರುತ್ತಿರುವ ಬೃಹತ್ ಬಾವಲಿಗಳು, ಕಾಡುಬೆಕ್ಕು, ಕಾಡುಪಾಪ, ಮುಸವಗಳು. ಅಲ್ಲಲ್ಲೇ ಕೇಳಿಸುವ ಕಾಡಾಡುಗಳ ಕೆನೆಯುವ ಸದ್ದು. ಬೃಹತ್ ಮರಗಳ ನಡುವೆ ಸದ್ದಿಲ್ಲದೆ ನಿಂತುಕೊಂಡು ನಿದ್ರಿಸುತ್ತಿರಬಹುದಾದ ಕಾಡಾನೆಗಳ ಪೆಡಸು ಪರಿಮಳ.

ಆಲಿ ರೈಟರ ಉದ್ದೇಶ ಬೇಟೆಯಲ್ಲ; ಬದಲಿಗೆ ನನ್ನ ಧೈರ್ಯವನ್ನು ಪರೀಕ್ಷಿಸುವುದಾಗಿತ್ತು ಎಂದು ಅರಿತಿದ್ದ ನಾನು ಧೈರ್ಯವನ್ನು ನಟಿಸುತ್ತ ಅವರ ಹಿಂದೆ ನಡೆಯುತ್ತಿದ್ದೆ. ಕಾಡುತೂಸು ತುಂಬಿಸಿದ್ದ ಒಂಟಿನಳಿಕೆಯ ಬಂದೂಕು ಹಿಡಿದಿದ್ದ ಅವರು ಹಣೆಗೆ ಬೇಟೆಯ ಹೆಡ್ ಲೈಟ್ ಕಟ್ಟಿಕೊಂಡಿದ್ದರು. ನಾನು ಕೈಯಲ್ಲಿ ಒಂದು ಕೋಲು ಹಿಡಿದುಕೊಂಡು ಇನ್ನೊಂದು ಕೈಯಲ್ಲಿ ಅಷ್ಟೇ ಉದ್ದದ ಟಾರ್ಚೊಂದನ್ನು ಹಿಡಿದುಕೊಂಡಿದ್ದೆ. 'ಬೇಕಾದಾಗ ಮಾತ್ರ ಟಾರ್ಚ್ ಬೆಳಗಿಸು. ಅದರಲ್ಲಿ ಬ್ಯಾಟರಿ ಕಮ್ಮಿ ಇದೆ' ಎಂದು ಅವರು ಎಚ್ಚರಿಸಿದ್ದರು.

ತಮಾಷೆ ಎಂದರೆ ಅವರ ಹೆಡ್ ಲೈಟಿನಲ್ಲೂ ಬ್ಯಾಟರಿ ಕಮ್ಮಿ ಇತ್ತು ಮತ್ತು ಅದು ಸಣ್ಣದೊಂದು ಚಿಮಿಣಿ ದೀಪದಂತೆ ಆ ಕತ್ತಲೆಯ ಕಾಡಿನಲ್ಲಿ ಬಿಟ್ಟುಬಿಟ್ಟು ಮಿನುಗುತ್ತಿತ್ತು.

'ಬ್ಯಾಟರಿ ಮುಗಿದು ಹೋಗುತ್ತಿರುವ ಕಾಮ್ರೇಡ್ ಆಲಿ ರೈಟರು' ನಾನು ಮನಸಿನಲ್ಲೇ ಗೊಣಗುತ್ತಿದ್ದೆ.

'ಪುಣ್ಯಕ್ಕೆ ಈ ಕಡೆಯ ಕಾಡಿನಲ್ಲಿ ಕರಡಿಗಳಿಲ್ಲ. ಇದ್ದರೆ ಕಷ್ಟವಾಗುತ್ತಿತ್ತು' ಆಲಿ ರೈಟರು ಹಳೆಯದೇನೋ ನೆನಪಿಸಿಕೊಂಡು ಗೊಣಗುತ್ತಿದ್ದರು.

ಈ ಕಥೆಯನ್ನು ನನಗೆ ಅವರು ಹಲವು ಸಲ ಹೇಳಿದ್ದರು.

ಹೇಳಿದ್ದು ಮರೆತು ಅದನ್ನೇ ಮತ್ತೆ ಮತ್ತೆ ಹೇಳುತ್ತಿದ್ದರು.

'ಅಕಸ್ಮಾತ್ ನಮ್ಮ ಎದುರು ಕಾಡಿನಲ್ಲಿ ಕರಡಿ ಬಂದರೆ ಏನು ಮಾಡಬೇಕು ಗೊತ್ತಾ?'

'ಒಂದು ಸಲ ತೆಲಂಗಾಣದ ನಲಗೊಂಡಾ ಕಾಡಿನಲ್ಲಿ ರಾತ್ರಿ ಅಡಗಿಕೊಂಡಿದ್ದೆವು.

'ಆ ದಾರಿಯಲ್ಲಿ ಬರಬೇಕಿದ್ದ ಪೊಲೀಸು ಜೀಪನ್ನು ಉಡಾಯಿಸಲು ನಾವು ಅಲ್ಲಿ ಬಂಡೆಯೊಂದರ ಸಂದಿನಲ್ಲಿ ಅಡಗಿಕೊಂಡಿದ್ದೆವು.'

'ಜೀಪು ಬರಲು ಇನ್ನೂ